# ಮನಮೋಹಕ ಬಾಬಾ ಬುಡನ್‌ಗಿರಿ



ಗಿರಿಯ ಅಂಚು

**ಪರ್ವತ ಶಿಖರದೆತ್ತರದಿಂದ ಕಾಣ ಸಿಗುವ ಸುತ್ತಲಿನ ಬೆಟ್ಟಗಳ ಕೆಳಗಿನ ಹಳ್ಳಿ, ಪಟ್ಟಣಗಳ ವಿಹಂಗಮ ನೋಟವನ್ನು ಆಸ್ವಾದಿಸುವುದು ಒಂದು ಅದ್ಭುತ ಅನುಭವ.**

ಚಿತ್ರ– ಲೇಖನ: **ರಮಣ್ ಶೆಟ್ಟಿ ರೆಂಜಾಳ್**

**ಚಿ**ಕ್ಕಮಗಳೂರಿನಿಂದ ಉತ್ತರಕ್ಕೆ ಪಶ್ಚಿಮಘಟ್ಟ ಶ್ರೇಣಿಯ ಉತ್ತುಂಗ ಶಿಖರ ಮುಳ್ಳಯ್ಯನಗಿರಿ ಮತ್ತು ಅದಕ್ಕೆ ಹೊಂದಿಕೊಂಡಿರುವ ಬಾಬಾಬುಡನ್ ಗಿರಿ ಪರ್ವತ ಶ್ರೇಣಿಯು ಪರ್ವತಾರೋಹಿಗಳಿಗೆ ಅಚ್ಚುಮೆಚ್ಚಿನ ತಾಣವಾಗಿದೆ. ಮಂಗಳೂರಿನಿಂದ ಚಿಕ್ಕಮಗಳೂರಿಗೆ 150 ಕಿ.ಮೀ.ಗಳ ಅಂತರದಲ್ಲಿದೆ.

ನಾನು ಹೊರಟದ್ದು ಜೂನ್ ಎರಡನೇ ವಾರ ಮಳೆಗಾಲದಾರಂಭದಲ್ಲಿ. ಮೇಘರಾಜನ ಪನ್ನೀರ ಹನಿಸಿಂಚನಕೆ ಚೇತರಿಸಿ ಮರುಜೀವ ತಳೆದು ಹಸಿರು ಚಿಗುರು ನಳನಳಿಸಿ ಮಾರ್ಗದುದ್ದಕ್ಕೂ ಕಂಗಳಿಗೆ ತಂಪೆರೆವ ಪರ್ವ ಕಾಲದಲ್ಲಿ! ಬಸ್ಸಿನ ಕಿಟಕಿಯ ಗಾಜು ಸರಿಸಿ ಹೊರಗೆ ಬೀಸುವ ಮಂದ ಮಾರುತದಲೆಗೆ ಮೊಗವೊಡ್ಡಿ ಸನಿಹ ಕಣ್ಣು ಹಾಯಿಸಿದರೆ, ಕಣ್ಣಳತೆಯು ತನ್ನ ದೃಷ್ಟಿ ಪರಿಧಿ–ಯೊಳಗೆ ಮೊದಲು ನೇತ್ರಾವತಿ ನದಿ ತುಂಬಿ ಹರಿವ ರಭಸ, ಬಳಿಕ ಕಡಿದಾದ ಚಾರ್ಮಾಡಿ ಘಾಟಿಯ ಕಠಿಣ ತಿರುವುಗಳ ರೋಮಾಂಚನ, ಅಲ್ಲಲ್ಲಿ ನೀರಿನ ಕಿರು ಝರಿಗಳ ಮತ್ತು ವಾನರಾದಿ ವನ್ಯ ಪ್ರಾಣಿಗಳ ದರ್ಶನ, ಬಣಕಲ್–ಮೂಡಿಗೆರೆಗಳ ಸಮತಟ್ಟಾದ ಬಯಲುಗಳ ಆಹ್ಲಾದಕರ ವಾತಾವರಣ.

ಚಿಕ್ಕಮಗಳೂರಿಂದ ಮುಳ್ಳಯ್ಯನ ಗಿರಿಗೆ 22 ಕಿ.ಮೀ. ದೂರ. ಬಾಬಾ ಬುಡನ್ ಗಿರಿ ಮತ್ತು ಮುಳ್ಳಯ್ಯನ ಗಿರಿ ಇಲ್ಲಿನ ಪಶ್ಚಿಮಘಟ್ಟ ಪರ್ವತ ಶ್ರೇಣಿಯ ಪ್ರಮುಖ ಶಿಖರದ್ವಯಗಳು. ಈ ಎರಡು ಶಿಖರಶ್ರೇಣಿಗಳು ಜೊತೆಯಾಗಿ ಅರ್ಧಚಂದ್ರಾಕಾರದಲ್ಲಿದ್ದು ಚಂದ್ರದ್ರೋಣ ಪರ್ವತ ಶ್ರೇಣಿಯೆಂದು ಕರೆಯಲ್ಪಡುತ್ತವೆ. ಬಾಬಾ ಬುಡನ್ ಗಿರಿಯು ಸಮುದ್ರ ಮಟ್ಟದಿಂದ 1895 ಮೀ. ಎತ್ತರವಿದ್ದರೆ, ಮುಳ್ಳಯ್ಯನ ಗಿರಿಯು 1930 ಮೀಟರ್ ಎತ್ತರವಿದ್ದು ಹಿಮಾಲಯ ಮತ್ತು ನೀಲಗಿರಿ ಪರ್ವತಗಳ ನಡುವಿನ